**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಸ್ಪೆಷಲ್ ಎಸ್ ಸಿ ಐಪಿಸಿ & ಎಸ್ ಸಿ/ಎಸ್ ಟಿ ನಂಃ 01/2019**

ಫ್ರಾಸಾ:- 4 (ಚಾಸಾ :-4 )

ಪ್ರಮಾಣೀಕರಿಸಿದ ದಿನಾಂಕಃ-09.11.2022

ಹೆಸರು : ಹರೀಶ್

ತಂದೆಯ ಹೆಸರು : ನಾರಾಯಣಪ್ಪ

ವಯಸ್ಸು : 29 ವರ್ಷ

ಕೆಲಸ : ಗಾರೆ ಕೆಲಸ

ವಾಸ : ಮುಗಿಲಹಳ್ಳಿ,
ಶ್ರೀನಿವಾಸಪುರ ತಾಲ್ಲೂಕು.

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾ.ಸಾ-1 ವೆಂಕಟೇಶಪ್ಪ ನನ್ನ ಚಿಕ್ಕಪ್ಪ. ಲಕ್ಷ್ಮಮ್ಮ ನನ್ನ ಚಿಕ್ಕಮ್ಮ. ನಾರಾಯಣಪ್ಪ ನನ್ನ ತಂದೆ. ರವಿಕುಮಾರ ನನ್ನ ಚಿಕ್ಕಪ್ಪನ ಮಗ. ಶ್ರೀನಾಥನು ರವಿಕುಮಾರ ಅಣ್ಣ. ಈಗ ನ್ಯಾಯಾಲಯದ ಮುಂದಿರುವ ಆರೂ ಜನ ಆರೊಪಿತರು ನಮ್ಮ ಊರಿನವರು ಆಗಿರುತ್ತಾರೆ. ನಾವು ಆದಿ ದ್ರಾವಿಡರು ಆಗಿರುತ್ತೇವೆ. ಆರೋಪಿತರು ಬಲಜಿಗ ಜಾತಿಯವರಾಗಿರುತ್ತಾರೆ.

ನನ್ನ ಚಿಕ್ಕಪ್ಪನ ಮಗ ಶ್ರೀನಾಥ್‌ನು 2 ನೇ ಅರೋಪಿ ಅನಂತಪ್ಪ ನ ಮಗಳನ್ನು ಪ್ರೀತಿ ಮಾಡುತ್ತಿದ್ದ. ಎರಡೂ ವರ್ಷಗಳಿಂದ ಆತ ಪ್ರೀತಿ ಮಾಡುತ್ತಿದ್ದ. ಆ ವಿಚಾರವನ್ನು ನಮಗೂ ಆತ ಹೇಳಿಕೊಳ್ಳುತ್ತಿದ್ದ. ಶ್ರೀನಾಥ ಮತ್ತು ಅನಂತಪ್ಪನ ಮಗಳು ಅಖಿಲಾ ಪ್ರೀತಿ ಮಾಡಿ

ಊರಿನ ಆಚೆ ನೀಲಗಿರಿ ತೋಪಿನಲ್ಲಿ ಭೇಟಿಯಾಗುತ್ತಿದ್ದರು. ಅವರು ಇಬ್ಬರೂ ಆಚೆ ಈಚೆ ಜೊತೆಯಲ್ಲಿ ಓಡಾಡುತ್ತಿರುವುದು ಭೇಟಿ ಯಾಗುತ್ತಿರುವುದು ಊರಿನ ಜನರಿಗೆ ಮತ್ತು ನಮಗೆ ಗೊತ್ತಾಯಿತು.

ಶ್ರೀನಾಥನಿಗೆ ಆ ಹುಡುಗಿ ಬೇರೆ ಜನಾಂಗದವಳು ಆಗಿದ್ದಾಳೆ ಹೀಗೆ ಮಾಡುವುದು ಸರಿಯಲ್ಲ ಎಂದು ಬುದ್ದಿ ಹೇಳುತ್ತಿದ್ದೆವು. ಅವರು ಪ್ರೀತಿ ಮಾಡುತ್ತಿದ್ದ ವಿಚಾರ ಅನಂತಪ್ಪನ ಮನೆಯವರಿಗೆ ಗೊತ್ತಾಗಿ ದಿನಾಂಕ 18/09/2018 ರಂದು ಸಂಜೆ 4.30 ಗಂಟೆ ಸುಮಾರಿಗೆ ಈಗ ನ್ಯಾಯಾಲಯದ ಮುಂದಿರುವ 5 ಜನ ಆರೋಪಿತರು ನಮ್ಮ ಮನೆ ಹತ್ತಿರ ಬಂದರು. ಆರೋಪಿತರು ನಮ್ಮ ಮನೆ ಹತ್ತಿರ ಬಂದು ಅವರ ಹುಡುಗಿಯನ್ನು ಶ್ರೀನಾಥ ಪ್ರೀತಿಸಿರುವುದಕ್ಕೆ ವಿರೋಧ ಮಾಡಿ ನಮ್ಮ ತಂದೆ ತಾಯಿಗೆ ಬೆದರಿಕೆ ಹಾಕಿದ್ದರು. ಕೀಳು ಜಾತಿಯ ನನ್ನ ಮಕ್ಕಳಾ, ಮಾದಿಗ ನನ್ನ ಮಕ್ಕಳಾ, ನಮ್ಮ ಹುಡುಗಿ ನಿಮಗೆ ಬೇಕಾ ಎಂದು ಬೈದಿದ್ದರು. ನಾನು ಮನೆಗೆ ಹೋದಾಗ ನನ್ನ ತಂದೆ ತಾಯಿಯರು ಈ ವಿಚಾರವನ್ನು ನನಗೆ ಹೇಳಿದ್ದರು. ಇದಾದ 8-10 ದಿವಸಗಳ ನಂತರ ಅಖಿಲಾಳಿಗೆ ಆರೋಪಿತರು ಬೇರೆ ಹುಡುಗನ ಜೊತೆ ಮದುವೆ ಮಾಡಿಕೊಟ್ಟಿದ್ದಾರೆ.

ದಿನಾಂಕ 26/09/2018 ರಂದು ಬೆಳಗ್ಗೆ 9.30 ಗಂಟೆಗೆ ಸುಮಾರಿಗೆ ನನ್ನ ತಂದೆ ನಾರಾಯಣಪ್ಪ ಕೆಲಸಕ್ಕೆ ಹೋಗಲು ಕೊರಚರ ವೆಂಕಟರಮಣಪ್ಪನ ಮನೆ ಹತ್ತಿರ ಹೋಗುತ್ತಿದ್ದಾಗ 1 ನೇ ಆರೋಪಿ ರಮೇಶನು ನನ್ನ ತಂದೆಯನ್ನು ಅಡ್ಡ ಹಾಕಿ, ಲೇ ನಾರಾಯಣಪ್ಪ, ಕೀಳು ಜಾತಿಯ ನನ್ನ ಮಗನೇ, ನಿಮಗೆ ನಮ್ಮ ಜಾತಿಯ ಹುಡುಗಿ

ಬೇಕಾ ಎಂದು ನನ್ನ ತಂದೆಯನ್ನು ಬೈದಿದ್ದಾರೆ. ಅವರು ಬೈದಾಗ ನನ್ನ ತಂದೆಯು ನಮ್ಮ ಹುಡುಗನನ್ನು ನಾವು ಭದ್ರಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಈ ವಿಚಾರವನ್ನು ನನ್ನ ತಂದೆ ನಮಗೆ ಹೇಳಿದಾಗ ನನ್ನ ಚಿಕ್ಕಪ್ಪ ಮತ್ತು ನಾನು ಶ್ರೀನಾಥನ ಹತ್ತಿರ ಹೋಗಿ ಬುದ್ದಿ ಹೇಳಿದೆವು. ಅದೇ ದಿನ ದಿನಾಂಕ 26/09/2018 ರಂದು ಸಾಯಂಕಾಲ 5.30 ಗಂಟೆ ಸುಮಾರಿಗೆ 5 ಜನ ಆರೋಪಿತರು ನಮ್ಮ ಮನೆ ಹತ್ತಿರ ಬಂದು ಮಾದಿಗ ನನ್ನ ಮಕ್ಕಳಾ ಸೂಳೆ ಮಕ್ಕಳಾ ಇದೆಲ್ಲಾ ಬೇಕಾ ಎಂದು ಬೈದರು. ಇನ್ನೊಂದು ಬಾರಿ ನಮ್ಮ ಜಾತಿಯ ಹುಡುಗಿಯ ತಂಟೆಗೆ ಬಂದರೆ ನಿಮ್ಮನ್ನು ಪ್ರಾಣ ಸಹಿತ ಬಿಡುವುದಿಲ್ಲ ನಮಗೆ ಜಾಸ್ತಿ ಅವಮಾನ ಆಗುತ್ತಿದೆ ಎಂದು ಹೇಳಿ ಬೆದರಿಕೆ ಹಾಕಿದರು. ನನ್ನ ತಂದೆ ಆಗಲೂ ನಿಮ್ಮ ತಂಟೆಗೆ ಬರುವುದಿಲ್ಲ ಎಂದು ಹೇಳಿದರು. ಆಗ ಅನಂತಪ್ಪ ಮತ್ತು ಸುಮಿತ್ರಮ್ಮ ನನ್ನ ತಾಯಿಯನ್ನು ಅದೇ ರೀತಿ ಹೇಳಿಕೊಂಡು ಬೈದರು. ಅರೋಪಿ ರಮೇಶ್ ಮತ್ತು ನಂಜುಂಡಪ್ಪ ಆಗ ಅವರನ್ನು ಹಿಂದಕ್ಕೆ ಕರೆದುಕೊಂಡು ಹೋದರು. ಪುನಃ ಶ್ರೀನಾಥನಿಗೆ ನಾವೆಲ್ಲಾ ಬುದ್ದಿ ಹೇಳಿದೆವು. ಆತನಿಗೆ ಅವರ ಸುದ್ದಿಗೆ ಹೋಗುವುದಿಲ್ಲ, ಅಖಿಲಾಳ ಜೊತೆ ನಾನು ಮಾತನಾಡುವುದಿಲ್ಲ ಎಂದು ಹೇಳಿಕೊಂಡ. ಆದರೂ ರಸ್ತೆಯಲ್ಲಿ ಹೋಗಿ ಬರುವಾಗ ನಿನ್ನನ್ನು ಸಾಯಿಸುತ್ತೇವೆ, ಎಲ್ಲಾದರೂ ಹೋಗಿ ಸಾಯಿ ಎಂದು ಬೈಯುತ್ತಾರೆಂದು ಹೇಳಿದ. 1 ನೇ ಆರೋಪಿ ರಮೇಶ, ಅನಂತಪ್ಪ, ಸುಮಿತ್ರಮ್ಮ ಆ ರೀತಿ ಬೈಯುತ್ತಾರೆಂದು ಹೇಳಿಕೊಂಡು ಅಳುತ್ತಿದ್ದ.

ದಿನಾಂಕ 28/09/2018 ರಂದು ಸಂಜೆ 4.30 ಗಂಟೆ ಸುಮಾರಿಗೆ ಶ್ರೀನಾಥ ಮನೆಯಲ್ಲಿಯೆ ಇದ್ದ. 4.30 ಗಂಟೆಗೆ ಮನೆ ಬಿಟ್ಟು ಹೋದವನು ಪುನಃ ಆತ ಕಾಣಿಸಲಿಲ್ಲ. ಆ ದಿವಸ ರಾತ್ರಿಯೆಲ್ಲಾ ಹುಡುಕಾಡಿದೆವು ಸಿಗಲಿಲ್ಲ.

ದಿನಾಂಕ 29/09/2018 ರಂದು ಬೆಳಗಿನ ಜಾವ 4.00 ಗಂಟೆ ಸುಮಾರಿಗೆ ನಾವು ಹುಡುಕಾಡುತ್ತಿದ್ದಾಗ ನಂಜುಂಡರೆಡ್ಡಿರವರ ಜಮೀನಿನಲ್ಲಿ ಪೊದೆಯಲ್ಲಿ ನೇಣು ಹಾಕಿಕೊಂಡಿದ್ದು ಕಾಣಿಸಿತು. ಇದನ್ನು ನೋಡಿ ನಾನು ನನ್ನ ತಂದೆಯವರಿಗೆ ಫೋನು ಮಾಡಿ ತಿಳಿಸಿದೆ. ಈ ವಿಚಾರ ಎಲ್ಲರಿಗೂ ತಿಳಿದು ಪೊಲೀಸರಿಗೆ ಫೋನು ಮಾಡಿ ಪೊಲೀಸರು ಅಲ್ಲಿಗೆ ಬಂದಿದ್ದರು. ನೇಣು ಹಾಕಿಕೊಂಡಿದ್ದ ಜಾಗದಲ್ಲಿ ಕೈಗೆ ಕಟ್ಟಿದ್ದ ಹಗ್ಗ ಮತ್ತು ಅದೇ ಜಾಗದಲ್ಲಿ ಬಿದ್ದಿದ್ದ ಚಪ್ಪಲಿಗಳು, ವಿವೋ ಮೊಬೈಲ್ ಫೋನುಗಳನ್ನು ಪೊಲೀಸರು ವಶಪಡಿಸಿಕೊಂಡರು. ಈ ಬಗ್ಗೆ ಪೊಲೀಸರು ಮಹಜರ್ ಬರೆದರು ಅದಕ್ಕೆ ನಾನೂ ಕೂಡ ಸಹಿ ಮಾಡಿದ್ದೇನೆ. ಸದರಿ ಮಹಜರನ್ನು ಈಗ ನಿ.ಪಿ. 2 ರಲ್ಲಿ ನೋಡುತ್ತಿದ್ದೇನೆ. ಸಾಕ್ಷಿಯ ಸಹಿಯನ್ನು ನಿ.ಪಿ.-2 ಎ ಎಂದು ಗುರುತಿಸಲಾಯಿತು. ನೇಣು ಹಾಕಿಕೊಂಡಿದ್ದಾಗ ಕಾಲಿನಲ್ಲಿ ರಕ್ತ ಬರುತ್ತಿತ್ತು, ನೆಲಕ್ಕೆ ಸೋರಿತ್ತು. ಈಗ ಮೊಬೈಲ್ ಫೋನನ್ನು ನೋಡುತ್ತಿದ್ದೇನೆ. ಅದು ಮುಮಾ-12 ಆಗಿರುತ್ತದೆ. ಒಂದು ಸಣ್ಣ ಹಗ್ಗ, ಎರಡು ಚಪ್ಪಲಿಗಳು, ಎರಡು ಕೈಗೆ ಕಟ್ಟಿದ್ದ ಕಪ್ಪು ದಾರ, ರಕ್ತ ಮಿಶ್ರಿತ ಮಣ್ಣುಗಳು ಮತ್ತು ಮಾದರಿ ಮಣ್ಣನ್ನು ಈಗ ನೋಡುತ್ತಿದ್ದೇನೆ. ಅವುಗಳು ಮು.ಮಾ.-1, 2, 7, 8, 9, 10, 11 ಆಗಿರುತ್ತದೆ. ಆತನು ನೇಣು ಹಾಕಿಕೊಂಡಿದ್ದ ಜಾಗದಲ್ಲಿ ಒಂದು ಬಿಳಿ ಚೀಟಿ ಬಿದ್ದಿತ್ತು. ಅದನ್ನೂ ಕೂಡ

ಪೊಲೀಸರು ವಶಪಡಿಸಿಕೊಂಡರು. ಪೊಲೀಸರು ಅಲ್ಲಿ ವಶಪಡಿಸಿಕೊಂಡಿದ್ದ ಚೀಟಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಿ.ಪಿ.–18 ನ್ನು ನೋಡುತ್ತಿದ್ದೇನೆ. ಅದೇ ಚೀಟಿ ಇರಬಹುದು. ಸಾಕ್ಷಿಯು ಮುಂದುವರೆದು ನಿ.ಪಿ.18 ರಲ್ಲಿ ಇರುವುದು ಶ್ರೀನಾಥನ ಬರವಣಿಗೆ ಇರಬಹುದು, ಆತನ ಬರವಣಿಗೆಯೂ ಅದೇ ರೀತಿಯಲ್ಲಿ ಇರುತ್ತಿತ್ತು ಎಂದು ನುಡಿಯುತ್ತಾರೆ. ಈಗ ನಾನು ಹೇಳಿದ ಎಲ್ಲಾ ವಿಚಾರಗಳನ್ನು ಪೊಲೀಸರಿಗೆ ಹೇಳಿದ್ದೆ. ನಿ.ಪಿ.–3 ರಿಂದ 17 ರವರೆಗೆ ಇರುವ ಭಾವಚಿತ್ರ ಗಳನ್ನು ಪೊಲೀಸರು ಅಲ್ಲಿಗೆ ಬಂದಿದ್ದಾಗ ತೆಗೆದಿದ್ದರು ಎಂದು ಗೊತ್ತಾಯಿತು. ನಿ.ಪಿ.–3 ರಿಂದ 17 ರಲ್ಲಿರುವಂತೆಯೇ ಆತ ನೇಣು ಹಾಕಿದ ಸ್ಥಿತಿಯಲ್ಲಿದ್ದ.

**(ಪಾಟೀ ಸವಾಲುಃ** ಪಾಟೀ ಸವಾಲಿಗೆ ಆರೋಪಿತರ ವಕೀಲರಾದ ಶ್ರೀ ಸಿ.ಕೆ. ವಕೀಲರು ಕಾಲಾವಕಾಶ ಕೇಳಿದ್ದಾರೆ. ನೀಡಲಾಯಿತು.)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/–

(ಹೆಚ್. ದೇವರಾಜು)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ.